ಸುಧಾರಣಾ ಕಾಯಿದೆಯಡಿ ಎಷ್ಟು ಪ್ರಕರಣಗಳಲ್ಲಿ ಅನುಮತಿ ನೀಡಲಾಗಿದೆ, ಎಷ್ಟು ಪ್ರಕರಣಗಳಲ್ಲಿ ನಿರಾಕರಿಸಲಾಗಿದೆ.

ಅ. 1) ಅನುಮತಿ ನೀಡಿರುವ ಒಟ್ಟು ಪ್ರಕರಣಗಳ ಸಂಖ್ಯೆ : 153

2) ನಿರಾಕರಿಸಿದ ಪ್ರಕರಣಗಳ ಸಂಖ್ಯೆ : 15

ಆ) ಶಿವಮೊಗ್ಗ ಜಿಲ್ಲೆಯಿಂದ ಹೊರಗಿನ ನಿವಾಸಿಯೆಂದು ವಿಳಾಸ ನೀಡಿ ಶಿವಮೊಗ್ಗ: ಭದ್ರಾವತಿಯಲ್ಲಿ ಜಮೀನು ಖರೀದಿಸಲು ಅನುಮತಿ ಪಡೆದವರ ವಿವರಗಳು (ದಿ:1.4.2004 ರಿಂದ 30.6.2009) ನೀಡುವುದು. (ಇದರಲ್ಲಿ ವ್ಯಕ್ತಿಯ ಹೆಸರು, ಉದ್ಯೋಗ, ವಿಳಾಸ, (ಗಾಮ ಸ.ನಂ.) ಇತ್ಯಾದಿ ನಮೂದಿಸುವುದು)?

ಆ) <u>ಹೊರಗಿನ ಜಿಲ್ಲೆಯವರಿಗೆ ಅನುಮತಿ ನೀಡಿರುವ ಪ್ರಕರಣಗಳು:</u>

ತಾಲ್ಲೂಕು	:	ಶಿವಮೊಗ್ಗ
ಗ್ರಾಮ	:	ದೇವಕಾತಿಕೊಪ್ಪ
ಸ.ನಂ. ಮತ್ತು ತರಹೆ	:	40, ತರಿ
ವಿಸ್ತೀರ್ಣ	:	3–30
ಅನುಮತಿ ಪಡೆದವರ ಹೆಸರು :		ರವಿ ಕುಮಾರ್ ಬಿನ್ ವೇಣುಗೋಪಾಲ್ ನಾಗರಾಜ ನಿಲಯ, ಮ.ನಂ.177/3,13ನೇ ಕ್ರಾಸ್ ಸಿ.ವಿ.ರಾಮನಗರ, ಬೆಂಗಳೂರು –93
ಉದ್ಯೋಗ ಮತ್ತು ವರಮಾನ :		ವಿದ್ಯುತ್ ಗುತ್ತಿಗೆದಾರ, 5 ವರ್ಷದ ಸರಾಸರಿ ವರಮಾನ ರೂ.1,04,000–00
ಅನುಮತಿ ನೀಡಿದ ದಿನಾಂಕ	:	16–10–2006.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	344
ಸದಸ್ಯರ ಹೆಸರು	:	ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ)
ಉತ್ತರಿಸುವವರು	:	ಮಾನ್ಯ ಕಂದಾಯ ಸಚಿವರು.
ಉತ್ತರಿಸುವ ದಿನಾಂಕ	:	13/07/2009

l) ನೈಸರ್ಗಿಕ ವಿಕೋಪ, ಪ್ರವಾಹ ಇತ್ಯಾದಿಗಳಿಗಾಗಿ 2009–10ನೇ ಸಾಲಿನಲ್ಲಿ ಪರಿಹಾರ ನೀಡಲು ಆದಾಯಮಿತಿ ತೆಗೆದು ಹಾಕಲಾಗುವುದೇ;

ಕೇಂದ್ರ ಸರ್ಕಾರವು ದಿನಾಂಕ:27–06–2007 ರಂದು ಹೊರಡಿಸಿರುವ ಪ್ರಕೃತಿ ವಿಕೋಪ ಮಾರ್ಗಸೂಚಿಗಳನ್ನು ಯಥಾವತ್ತಾಗಿ ಅಳವಡಿಸಿಕೊಂಡಿದ್ದು ಇದರಲ್ಲಿ ಪರಿಹಾರ ನೀಡಲು ಯಾವುದೇ ಆದಾಯ ಮಿತಿಯನ್ನು ನಿಗಧಿಗೊಳಿಸಿರುವುದಿಲ್ಲ.

2) ಭದ್ರಾವತಿ ತಾಲ್ಲೂಕು ಯಡೀಹಳ್ಳಿ ಅಶೋಕನಗರ ಇತ್ಯಾದಿ ಕಡೆ ಹೆಚ್ಚಿನ ಮಳೆಗಾಳಿಯಿಂದಾಗಿ ಸಾವಿರಾರು ಅಡಿಕೆ, ತೆಂಗು ಬಾಳಗಿಡಗಳು ನೆಲಕ್ಕೆ ಬಿದ್ದು ರೈತರಿಗೆ ಆರ್ಥಿಕ ನಷ್ಟ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

3) ಈ ರೈತರಿಗೆ ಕನಿಷ್ಟ ಎಕರೆ 1ಕ್ಕೆ ರೂ.4,000 ಪರಿಹಾರ ನೀಡಿ ನೆರವಾಗುವ Package ಯೋಜನೆ ಸರ್ಕಾರದ ಮುಂದೆ ಇದೆಯೇ;

ಇಲ್ಲ,

ಕೇಂದ್ರ ಸರ್ಕಾರದ ಪ್ರಕೃತಿ ವಿಕೋಪ ಮಾರ್ಗಸೂಚಿಗಳನ್ವಯ ಶೇಕಡ 50ಕ್ಕಿಂತ ಹೆಚ್ಚು ನಾಶವಾದ ಬಹುವಾರ್ಷಿಕ ಬೆಳೆಗಳಿಗೆ ಹೆಕ್ಟೇರ್ 1ಕ್ಕೆ ರೂ. 6000–00 ಗಳಂತೆ ಪರಿಹಾರ ನೀಡಲಾಗುತ್ತಿದೆ.

195 ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ)

ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು.

ಅ) ಮಲೆನಾಡು ಅಭಿವೃದ್ಧಿ ಮಂಡಳಿ ಅಸ್ತಿತ್ವದಲ್ಲಿರುವುದು ನಿಜವೇ?

ಹೌದು

ಆ) ಕಳೆದ ಮೂರು ವರ್ಷಗಳಿಂದ (2006–07, 2007–08, 2008–09) ಸದರಿ ಮಂಡಳಿಗೆ ಸರ್ಕಾರದಿಂದ ಬಿಡುಗಡೆಯಾದ ಮೊತ್ತ ಎಷ್ಟು? (ವರ್ಷಾವಾರು ವಿವರಗಳನ್ನು ನೀಡುವುದು)

ಕಳೆದ ಮೂರು ವರ್ಷಗಳಿಂದ ಸದರಿ ಮಂಡಳಿಗೆ ಬಿಡುಗಡೆಯಾದ ಹಣದ ಮೊತ್ತ ಕೆಳಕಂಡಂತಿದೆ,

(ಲಕ್ಷರೂಗಳಲ್ಲಿ)

ವರ್ಷ	ಬಿಡುಗಡೆಯಾದ ಹಣ
2006–07	3455.00
2007–08	2824.00
2008–09	1057.50